ಖರ್ಚಿನಲ್ಲಿ, ಸರ್ಕಾರದ ಖರ್ಚಿನಲ್ಲಿ ಇದನ್ನು ಹಾಕತಕ್ಕ ಪ್ರಮೇಯ ಏನಿದೆ? ಕೊನೇಪಕ್ಷ ಇದನ್ನು ಮಾಡಬಾರದು ಎಂದು ಹೇಳುವುದಕ್ಕೂ ನೀವು ತಯಾರಿಲ್ಲವಲ್ಲ.

ಶ್ರೀ ಎಸ್. ಬಂಗಾರಪ್ಪ:- ಮಹಾನಗರಪಾಲಿಕೆಯ ಖರ್ಚು, ಅದು ನಮ್ಮ ಅಕೌಂಟಿಗೆ ಬರುವುದಿಲ್ಲ; ಅವರ ಅಕೌಂಟ್‌ಗೆ ಹೋಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಹಾಗಾದರೆ ಮಹಾನಗರಪಾಲಿಕೆ ಸರ್ಕಾರದ ಅಧೀನದಲ್ಲಿ ಅಲ್ಲವೇ ಸ್ವಾಮಿ ಕೆಲಸ ಮಾಡುವುದು?

ಶ್ರೀ ಎಸ್ ಬಂಗಾರಪ್ಪ:- ಎಂ.ಜಿ.ಆರ್. ಬಗ್ಗೆ ಗೌರವ ನಮ್ಮದು ನಿಮ್ಮದು ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಗೌರವ ಇಟ್ಟುಕೊಳ್ಳಿ. ಸೈಟ್ ಹಂಚಿ. ಹಾಗಾದರೆ ಎಂ.ಜಿ.ಆರ್. ಪ್ರತಿಮೆಯನ್ನು ಹಾಕಿಸುತ್ತೀರಾ ಕಾರ್ಪೋರೇಷನ್ ಮುಂದೆ?

ಶ್ರೀ ಎಸ್. ಬಂಗಾರಪ್ಪ:- ಇಂದಿರಾಗಾಂಧಿ ಅವರದು ಹಾಕಿದ್ದಾರೆ. ರಾಜೀವ್ ಗಾಂಧಿ ಅವರದು ಹಾಕಿದ್ದಾರೆ. ಅವರದೂ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಹಾಕಿದ್ದಾರೆ. ಇವತ್ತಿನ ಪರಿಸ್ಥಿತಿ ಹಿನ್ನೆಲೆಯಲ್ಲಿ ಡಿಫೆಂಡ್ ಮಾಡಿಕೊಳ್ಳುವುದಾದರೆ....

ಅಧ್ಯಕ್ಷರು:- ಅದನ್ನು ನೋಡೋಣ. ಅದು ಯಾವುದು ಹಾಕಿದ್ದಾರೆ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅಧ್ಯಕ್ಷರೆ, ಸರ್ಕಾರದ ಈ ಧೋರಣೆಯನ್ನು ನಾನು ಒಪ್ಪುವುದಕ್ಕಾಗುವುದಿಲ್ಲ, ನಾನು ತೀವ್ರವಾಗಿ ಇದನ್ನು ಪ್ರತಿಭಟನೆ ಮಾಡುತ್ತೇನೆ. ಇದೇನಾಗುತ್ತದೆ ಎಂದರೆ, ನಾವು ಒಂದು ಪ್ರಾರಂಭ ಮಾಡಿದರೆ ಇದು ಎಲ್ಲಿ ಅಂತ್ಯವಾಗುತ್ತದೆ ತಾವು ವಿಚಾರ ಮಾಡಿ. ಏನೋ ಬಹಳ ದೊಡ್ಡ ರಾಜಕೀಯ ನಾಯಕರುಗಳಿದ್ದಾರೆ ಎಂದು ಹೇಳಿದರೆ ಒಪ್ಪೋಣ. ಈಗ ರಾಜೀವ್ ಗಾಂಧಿಯವರ ಫೋಟೋ ಹಾಕಿದ್ದೀರಿ. ನಾವೇನಾದರೂ ಅದರ ಬಗ್ಗೆ ಚಕಾರ ಎತ್ತಿದ್ದೇವೆಯೇ ? ನೀವು ಎಲ್ಲ ಕಾರ್ಯಕ್ರಮಗಳಲ್ಲೂ ರಾಜೀವ್ ಗಾಂಧಿಯವರ ಹೆಸರನ್ನು ಹಾಕುತ್ತೀರಿ. ಈಗ ಆಶ್ರಯ ಕಾರ್ಯಕ್ರಮ ಮಾಡುತ್ತಿದ್ದೀರಿ. ಅದರ ಅಡ್ವರ್ಟೈಸ್‌ಮೆಂಟ್‌ಗಳಲ್ಲಿ ಇಂದಿರಾ ಗಾಂಧಿಯವರದು, ರಾಜೀವ್ ಗಾಂಧಿಯವರದು ಫೋಟೋಗಳನ್ನು ಹಾಕಿದ್ದೀರಿ. ಅದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಏಕೆಂದರೆ, ಅವರು ರಾಷ್ಟ್ರದ ಪ್ರಧಾನಿಗಳಾಗಿದ್ದರು. ಆದರೆ ಎಂ.ಜಿ.ಆರ್. ಅವರದು ಹಾಕುತ್ತೇವೆ ಎಂದು ಹೇಳುವುದಾದರೆ, ದಯವಿಟ್ಟು ಕ್ಷಮಿಸಬೇಕು, ಅದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಧೋರಣೆಯನ್ನು ನಾನು ಬಹಳ ತೀವ್ರವಾಗಿ ಪ್ರತಿಭಟನೆ ಮಾಡುತ್ತೇನೆ. ಇದನ್ನು ಖಂಡನೆ ಮಾಡಿ ಇವತ್ತು ಸದನದಿಂದ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬೆಳಗಾವಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ನಿಲುವನ್ನು ಖಂಡತುಂಡವಾಗಿ ಪ್ರತಿಸಲವೂ ನಾವು ಟೀಕೆ ಮಾಡಿದ್ದೇವೆ.

(ಶ್ರೀ ಪಿ. ಜಿ. ಆರ್. ಸಿಂಧ್ಯವರರು ಸಭಾತ್ಯಾಗ ಮಾಡಿದರು. ಅವರನ್ನು ಹಿಂಬಾಲಿಸಿ ಉಳಿದ ಜನತಾದಳ ಪಕ್ಷದ ಸದಸ್ಯರು ಸಹ ಹೊರನಡೆದರು. ಅವರಲ್ಲಿ ಡಾ: ಜೀವರಾಜ ಆಳ್ವ ಅವರು ಸಹ ಇದ್ದರು)

ಅಧ್ಯಕ್ಷರು:- ಭಕ್ತವಚ್ಚಲಂ ಲಾಸ್ಟ್ ಪಾಯಿಂಟ್.

ಶ್ರೀ ಎಸ್. ಬಂಗಾರಪ್ಪ:- ಇದು ಬಹಳ ಚೆನ್ನಾಗಿದೆ. ಅವರು ಸಭಾತ್ಯಾಗ ಮಾಡಿದಾಗ ಡಾ: ಜೀವರಾಜ ಆಳ್ವ ಅವರಿಗೆ ಏನೂ ಗೊತ್ತಿಲ್ಲ. ಅವರು ಬಂದವರು ಹಾಗೆಯೇ ಹೊರಟು ಹೋಗಿಬಿಡುವುದೆ?

SRI M. BHAKTHAVACHALAM:- The photos of former Prime Minister....

MR. SPEAKER:- If you are reading it over, I am not going to allow.

ಶ್ರೀ ಎಂ. ಭಕ್ತವಚ್ಚಲಂ:- ರೀಡಿಂಗ್ ಆದಮೇಲೆ ನಾನು ಮಾತನಾಡುತ್ತೇನೆ.